# **ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.**

## **ಎಸ್.ಸಿ. 63/2025**

1. ಯಾದಗಿರಿ ಗ್ರಾಮೀಣ ಪೊಲೀಸಠಾಣೆ .....ಫಿರ್ಯಾದಿ

ವಿರುದ್ಧ

1. ಬಸವರಾಜ ಮತ್ತು ಇತರರು .....ಆರೋಪಿತರು

**ದೋಷಾರೋಪಣೆ**

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ಬಸವರಾಜ ತಂದೆ ಈರಣ್ಣ ಬಸವಂತಪೂರದೊರ, ವಯಸ್ಸುಃ 24 ವರ್ಷ, ಉದ್ಯೋಗಃ ಟ್ರ್ಯಾಕ್ಟರ ಚಾಲಕ ಸಾಃ ಹತ್ತಿಕುಣಿ ತಾಃ ಜಿಃ ಯಾದಗಿರಿ.
2. ಮಹೇಶ ತಂದೆ ಕಾಂತಪ್ಪ @ ಲಕ್ಷ್ಮಿಕಾಂತ್ ತಮ್ಮಣ್ಣೋರ್, ವಯಸ್ಸುಃ 24 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಹತ್ತಿಕುಣಿ ತಾಃ ಜಿಃ ಯಾದಗಿರಿ.
3. ಮಂಜುನಾಥ ತಂದೆ ಭೀಮರಾಯ ಯಾದಗಿರಿ, ವಯಸ್ಸುಃ 23 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಹತ್ತಿಕುಣಿ ತಾಃ ಜಿಃ ಯಾದಗಿರಿ.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಯಾದಗಿರಿ ಗ್ರಾಮೀಣ ಪೊಲೀಸ ಠಾಣಾ ಹದ್ದಿಯ ಪೈಕಿ ಹತ್ತಿಕುಣಿ ಗ್ರಾಮದ ದಿಃ 07.12.2024 ರಂದು ಸಾಯಂಕಾಲ 6.00 ಗಂಟೆಗೆ ಸುಮಾರು ಚಾಸಾ-1 ರವರು ಮುಖ್ಯ ರಸ್ತೆ ಮೇಲೆ ಹೋಗುತ್ತಿರುವಾಗ ಆರೋಪಿತರಾದ ನೀವು ಮತ್ತು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ನಂ.4 ರಿಂದ 7 ರವರು ಏಕೋದ್ದೆದಿಂದ ಗುಂಪುಕಟ್ಟಿಕೊಂಡು ಹೋಗಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯಾ ಸಂಹಿತೆ ಕಲಂ.189(2) ಸಹವಾಚಕ

190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ಸ್ಥಳಕ್ಕೆ ಬಂದು ದೊಂಬಿ ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯಾ ಸಂಹಿತೆ ಕಲಂ.191(2) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೈಯಲ್ಲಿ ಚಾಕು, ರಾಡು ಹಿಡಿದುಕೊಂಡು ಬಂದು ದೊಂಬಿ ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯಾ ಸಂಹಿತೆ ಕಲಂ.191(3) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ರವರಿಗೆ ಲೇ ಸೂಳೆ ಮಗನೆ ನಮ್ಮ ಮುಂದೆ ಹೋಗಲು ನಿನಗೆ ಎಷ್ಟು ಧೈರ್ಯ ಲೇ ಸುಳೆ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 352 ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಅವರು ಓಡಿ ಹೋಗುವಾಗ ಕೂಡಾ ಬೆನ್ನು ಹತ್ತಿ ಹೋಗಿ ಎಲ್ಲಿಗೆ ಹೋಗುತ್ತಿ ಮಗನೆ ನಿನಗೆ ಬಿಡುವುದಿಲ್ಲ, ಲೇ ಕಬ್ಬೇರ ಸುಳೆ ಮಕ್ಕಳೇ ನಮ್ಮ ತಂಟೆಗೆ ಬಂದರೆ ನೀವು ಊರಲ್ಲಿ ಕಾಲ ಮಾಡುವುದಿಲ್ಲ ಸುಳೆ ಮಕ್ಕಳೆ ಮುಚ್ಚಿಕೊಂಡು ಇರಬೇಕು ಅಷ್ಟೇ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 351(2) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ರವರಿಗೆ ಮಾರಕಾಸ್ತ್ರಗಳಿಂದ ಹೊಡೆದು ಒಳಪೆಟ್ಟು ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 115(2) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

7. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ರವರು ಓಡಿ ಹೋದರು ಕೂಡಾ ಬೆನ್ನು ಹತ್ತಿ ಹೋಗಿ ಎಲ್ಲಿಗೆ ಹೋಗುತ್ತಿ ಮಗನೆ ನಿನಗೆ ಬಿಡುವುದಿಲ್ಲ ಎಂದು ಬೆನ್ನು ಹತ್ತಿ ಹೊಡೆಯುತ್ತಿರುವಾಗ ಚಾಸಾ-4 ಮತ್ತು 5 ರವರು

ಅಡ್ಡ ಹೋದಾಗ ಅವರಿಗೂ ಕೂಡಾ ನೀವೆಲ್ಲರೂ ಸೇರಿ ಲೇ ಸೂಳೆ ಮಕ್ಕಳೆ ಊರಲ್ಲಿ ನಿಮ್ಮ ಸೊಕ್ಕು ಬಹಳ ಆಗಿದೆ ನಿಮಗೆ ಇವತ್ತು ಗತಿಕಾಣಿಸುತ್ತೇವೆ ಲಂಗಾ ಸುಳೆ ಮಕ್ಕಳೆ ಅಂತಾ ಬೈದು ಅವರಿಗೂ ಕೂಡ ಚಾಕು ಮತ್ತು ರಾಡಿನಿಂದ ತಲೆಗೆ ಮೈಗೆ ಹೊಡೆದು ರಕ್ತಗಾಯ ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 118(1) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

8. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಚಾಕು ಮತ್ತು ರಾಡಿನಿಂದ ತಲೆಗೆ ಹೊಡೆದು ರಕ್ತಗಾಯ ಮಾಡಿದ್ದು, ಚಾಸಾ-1 ರವರು ಆರೋಪಿತರಿಂದ ತಪ್ಪಿಸಿಕೊಂಡು ಗ್ರಾಮದ ಅಂಬಿಗರ ಚೌಡಯ್ಯುನ ಕಟ್ಟೆಯ ಕಡೆಗೆ ಹೋಗಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 109(1) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 06.02.2026 ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.